## ರಾಮಕೃಷ್ಣ ಮಹಾಸಂಘದ ಹೊಸ ಕೇಂದ್ರ

ಆಂಧ್ರಪ್ರದೇಶದ ಕಡಪಾದಲ್ಲಿ ರಾಮಕೃಷ್ಣ ಮಹಾಸಂಘದ ಹೊಸ ಕೇಂದ್ರವು ಪ್ರಾರಂಭವಾಗಿದೆ. ೧೯೧೦ರಲ್ಲಿಯೇ ಈ ನಗರದಲ್ಲಿ ಶ್ರೀರಾಮಕೃಷ್ಣ ಸಮಾಜ ಎಂಬ ಆಶ್ರಮ ಪ್ರಾರಂಭವಾಯಿತು. ಶ್ರೀರಾಮಕೃಷ್ಣ ಪರಮಹಂಸರ ಪರಮ ಭಕ್ತರಾದ ಸೂಫಿ ಮುಸ್ಲಿಂ, ಖಾನ್ ಬಹದೂರ್ ಮಂಜುಮಯ್ಯ ಎಂಬುವವರು ಇದಕ್ಕೆ ಕಟ್ಟಡವನ್ನು ದಾನವಾಗಿ ನೀಡಿದರು. ಇವರ ಶ್ರೇಷ್ಠತೆಯನ್ನು ಗುರುತಿಸಿದ ಬ್ರಿಟಿಷ್ ಸರ್ಕಾರವು ಇವರಿಗೆ ಖಾನ್ ಬಹದೂರ್ ಎಂಬ ಬಿರುದನ್ನು ನೀಡಿತ್ತು. ೧೯೨೪ರಲ್ಲಿ ಕಡಪಾ ಜಿಲ್ಲೆಯ ಪ್ರಪ್ರಥಮ ಪುಸ್ತಕ ಭಂಡಾರವು ಇಲ್ಲಿ ವಿವೇಕಾನಂದರ ಹೆಸರಿನಲ್ಲಿ ಪ್ರಾರಂಭವಾಯಿತು. ೧೯೨೫ರಲ್ಲಿ ಸ್ವಾಮಿ ಶಿವಾನಂದಜಿಯವರು ಈ ಆಶ್ರಮಕ್ಕೆ ಭೇಟಿ ಇತ್ತು ಒಂದು ಉಪನ್ಯಾಸವನ್ನೂ ನೀಡಿದ್ದರು. ಅವರು ಮೇಲೆ ಹೆಸರಿಸಿದ ಮುಸ್ಲಿಂ ಭಕ್ತರನ್ನೂ ಸಂಧಿಸಿದ್ದರು ಮತ್ತು ತಮ್ಮ ಒಂದು ಪತ್ರದಲ್ಲಿ ಅವರ ಬಗ್ಗೆ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇದುವರೆಗೂ ಭಕ್ತರು ನಡೆಸುತ್ತಿದ್ದ ಈ ಆಶ್ರಮವನ್ನು ಈಗ ರಾಮಕೃಷ್ಣ ಮಹಾಸಂಘವು ಅಧಿಕೃತವಾಗಿ ಸ್ವೀಕರಿಸಿದ್ದು, ಇದೇ ಆಗಸ್ಟ್ ೧೮ರಂದು ಅದರ ಉದ್ಘಾಟನೆಯ ಸಮಾರಂಭವು ನೆರವೇರಿತು. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಹಾಗೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆಗಿರುವ ಪೂಜ್ಯ ಸ್ವಾಮಿ ಗೌತಮಾನಂದಜಿಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾಧಿಕಾರಿಗಳಾದ ಜಯೇಶ್‌ರಂಜನ್ ಅವರು ಮುಖ್ಯ ಅತಿಥಿಗಳಾಗಿದ್ದರು.

### ಪರಿಹಾರ ಕಾರ್ಯ

ಅಸ್ಸಾಂ, ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಉಂಟಾದ ನೆರೆ ಹಾವಳಿಯಿಂದ ಸಂತ್ರಸ್ತರಾದ ಸಾವಿರಾರು ಜನರಿಗೆ ರಾಮಕೃಷ್ಣ ಮಹಾಸಂಘವು ಪರಿಹಾರ ಕಾರ್ಯವನ್ನು ಕೈಗೊಂಡು ಆಹಾರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಸೇವಾಕಾರ್ಯಕ್ಕೆ ಧನಸಹಾಯ ಮಾಡಲಿಚ್ಛಿಸುವವರು ನಗದು, ಚೆಕ್ ಅಥವಾ ಡ್ರಾಫ್ಟ್ ಮೂಲಕ ಹಣವನ್ನು "ರಾಮಕೃಷ್ಣ ಮಿಷನ್, ಬೇಲೂರು ಮಠ" ಈ ಹೆಸರಿನಲ್ಲಿ ಕಳುಹಿಸಬಹುದು.

## ಮನೆಮನೆಯಲ್ಲಿ ಶ್ರೀಮಾತೆ ಶಾರದಾದೇವಿಯವರ ಪೂಜಾಕೈಂಕರ್ಯ

ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮೋತ್ಸವದ ಅಂಗವಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಭಕ್ತರಲ್ಲಿ ಕೆಲವರು ಮನೆಮನೆಯಲ್ಲಿ ಶ್ರೀಮಾತೆಯವರ ಸಂಕೀರ್ತನಾದಿಗಳನ್ನು ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಆ ಮನೆಯವರು ಹಾಗೂ ಅಭ್ಯಾಗತರು ಶ್ರೀಮಾತೆಯವರ ಕೃಪಾಶೀರ್ವಾದಗಳಿಗೆ ಪಾತ್ರರಾಗುವ ಒಂದು ಅಪೂರ್ವ ಸುಯೋಗವನ್ನು ಕಲ್ಪಿಸಿದ್ದಾರೆ. ಶ್ರೀರಾಮಕೃಷ್ಣ ಆಶ್ರಮದ ಭಕ್ತಾದಿಗಳಲ್ಲಿ ಕೆಲವರು "ಗೀತಾ ಬಳಗ"ವೆಂಬ ಒಂದು ಸತ್ಸಂಗ ಕೂಟದಡಿ ಸೇರಿ ಶ್ರೀಮಾತೆ ಶಾರದಾದೇವಿಯವರ ಈ ವಿಶೇಷ ಕೈಂಕರ್ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇದರ ಮುಂದಾಳಾಗಿ ಸೇವೆ ಸಲ್ಲಿಸುತ್ತಿರುವವರು ಶ್ರೀಮತಿ ಗಿರಿಜಾದೇವಿಯವರು.

ಪ್ರಸಕ್ತ ವರ್ಷಾರಂಭದಿಂದಲೇ ಮೊದಲ್ಗೊಂಡ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಆತ್ಮವಿದಾನಂದಜಿಯವರು ನೆರವೇರಿಸಿದರು. ಯಾದವಗಿರಿಯ ಭಕ್ತರೊಬ್ಬರ ಮನೆಯಲ್ಲಿ ಮೊದಲ ಪೂಜೆಯಲ್ಲಿ ಪಾಲ್ಗೊಂಡ ಸ್ವಾಮೀಜಿಯವರು ಆಧ್ಯಾತ್ಮಿಕ ಜೀವನದ ಮುನ್ನಡೆಗೆ ಸತ್ಸಂಗದ ಆವಶ್ಯಕತೆ ಹಾಗೂ ಮಹಿಮೆಯ ಬಗ್ಗೆ ಪ್ರವಚನ ನೀಡಿ, ಹಮ್ಮಿಕೊಂಡಿರುವ ಈ ಕಾರ್ಯಕ್ರಮದ ಪೂರ್ಣ ಯಶಸ್ಸಿಗೆ ಶ್ರೀಮಾತೆಯವರ ಕೃಪಾನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು.

ಮೈಸೂರಿನಲ್ಲಿ, ಬೆಂಗಳೂರಿನ ಕೆಲವರ ಮನೆಗಳಲ್ಲಿ ಹಾಗೂ ಚಾಮರಾಜನಗರದಲ್ಲಿಯೂ ಸೇರಿದಂತೆ ಈವರೆಗೆ ಒಟ್ಟು ಮೂವತ್ತೈದು ಜನ ಭಕ್ತರ ಮನೆಗಳಲ್ಲಿ ಪೂಜಾಕೈಂಕರ್ಯ ನೆರವೇರಿಸಲಾಗಿದೆ. ಪ್ರಾರಂಭದ ದಿನಗಳಲ್ಲಿ ಕೇವಲ ಶುಕ್ರವಾರಗಳಂದು ಮಾತ್ರ ನಡೆಯುತ್ತಿದ್ದ ಈ ಪೂಜೆಯನ್ನು ಭಕ್ತರ ಕೋರಿಕೆಯ ಮೇರೆಗೆ ಇತರ ವಾರಗಳಂದೂ ವ್ಯವಸ್ಥೆಗೊಳಿಸಲಾಗುತ್ತಿದೆ. ಕಾಲಾವಕಾಶವನ್ನನುಸರಿಸಿ ಆಶ್ರಮದ ಯತಿವರ್ಯರೂ ಸಹ ಈ ಉಪಾಸನಾ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಪ್ರವಚನ ಹಾಗೂ ಭಜನೆ ನಡೆಸಿಕೊಡುತ್ತಿರುವುದು ಒಂದು ವಿಶೇಷ.

ಈ ಉಪಾಸನೆ ಅತ್ಯಂತ ಸರಳವಾಗಿರುವುದರಿಂದಲೂ ಹೆಚ್ಚು ಖರ್ಚಿಲ್ಲದೆ ಅಧಿಕ ಫಲ ನೀಡುವಂಥದ್ದು ಆಗಿರುವುದರಿಂದಲೂ ಹೆಚ್ಚಿನ ಭಕ್ತರು ಉತ್ಸಾಹದಿಂದ ಭಾಗವಹಿಸುತ್ತಿದ್ದು ಕಾರ್ಯಕ್ರಮದ ಜನಪ್ರಿಯತೆಯನ್ನು ತೋರಿಸುತ್ತದೆ.

ಶ್ರೀಮಾತೆಯವರ ಉಪಾಸನೆ ಮಾಡಬಯಸುವ ಭಕ್ತರ ಗೃಹಕ್ಕೆ ದಿವ್ಯತ್ರಯರ ಭಾವಚಿತ್ರಗಳನ್ನು ಕೊಂಡೊಯ್ದು ಪ್ರಶಸ್ತ ಸ್ಥಳದಲ್ಲಿ ಸ್ಥಾಪಿಸಿ ಗಂಧಪುಷ್ಪಗಳಿಂದ ಅಲಂಕರಿಸಲಾಗುತ್ತದೆ. ಶ್ರೀಮಾತೆಯವರಿಗೆ ಅಷ್ಟೋತ್ತರ ನಾಮದಿಂದಲೂ, ಭಗವಾನ್ ಶ್ರೀರಾಮಕೃಷ್ಣರಿಗೆ ಹಾಗೂ ಸ್ವಾಮಿ ವಿವೇಕಾನಂದರಿಗೆ ಹದಿನಾರು ನಾಮಗಳಿಂದಲೂ ಪುಷ್ಪಾರ್ಚನೆ ಮಾಡಿ, ನೈವೇದ್ಯದ ಅನಂತರ ಆರತಿ ಬೆಳಗಲಾಗುತ್ತದೆ. ಶ್ರೀಮಾತೆಯವರ ಪವಿತ್ರ ಸನ್ನಿಧಾನದಲ್ಲಿ ಸಾಮೂಹಿಕ ಭಜನೆಯ ನಂತರ ಶ್ರೀಮಾತೆಯವರ ಜೀವನದಿಂದ ಅಥವಾ "ಶ್ರೀರಾಮಕೃಷ್ಣ ವಚನವೇದ"ದಿಂದ ಕೆಲವು ಭಾಗಗಳನ್ನು ವಾಚನ ಮಾಡಲಾಗುತ್ತದೆ. ಭಕ್ತರ ಅನುಕೂಲಕ್ಕೆ ತಕ್ಕಂತೆ ಈ ಉಪಾಸನೆಯನ್ನು ಬೆಳಗ್ಗೆ ೧೧ ಗಂಟೆಯಿಂದ ಅಥವಾ ಸಂಜೆ ೪.೩೦ಗಂಟೆಯಿಂದ ವ್ಯವಸ್ಥೆಗೊಳಿಸಲಾಗುತ್ತದೆ. ಆಸಕ್ತ ಭಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗಳಲ್ಲಿ ಮಾಹಿತಿ ಪಡೆದು ಕೈಂಕರ್ಯದಲ್ಲಿ ಭಾಗಿಗಳಾಗಬಹುದಾಗಿದೆ.

ದೂರವಾಣಿ ಸಂಖ್ಯೆ: 2410941, 2519737 ಮತ್ತು 2518275